ಮನೆಗೆ ಯಾರಾದರೂ ಬಂದಾಗ ಶಂಭೂನ ಈ ವರ್ತನೆಯಿಂದ ಅವನ ತಾಯಿಗೆ ಮುಜುಗರವಾಗುತ್ತಿತ್ತು.

ಅವನ ಈ ದುರಭ್ಯಾಸ ಬಿಡಿಸಲು ಅವನ ತಾಯಿ ಎಷ್ಟೇ ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲ. ಒಳ್ಳೆಯ ಮಾತಿನಿಂದ ಬುದ್ಧಿ ಹೇಳಿ ನೋಡಿದರು. ರಮಿಸಿ ಹೇಳಿದರು. ಬಯ್ದು ನಾಲ್ಕು ಪೆಟ್ಟು ಹಾಕಿಯೂ ಆಯಿತು. ಇನ್ನೊಮ್ಮೆ ಹೀಗೆಲ್ಲಾ ಹೇಳಿದರೆ ಬಾಯಿಗೆ ಖಾರದ ಮೆಣಸು ಅರೆಯುತ್ತೇನೆ ಎಂದು ಹೆದರಿಸಿಯೂ ನೋಡಿದರು. ಏನೇ ಆದರೂ ಶಂಭೂ ತನ್ನ ಕೆಟ್ಟ ಚಾಳಿ ಬಿಡಲಿಲ್ಲ.

ಅದೊಂದು ದಿನ ಮನೆಗೆ ಬಂದ ಅತಿಥಿಗಳೆದುರು ಶಂಭೂ ಯಥಾಪ್ರಕಾರ ತನ್ನ ಕೆಟ್ಟ ಮಾತಿನ ಪ್ರದರ್ಶನ ಮಾಡಿದಾಗ ತಾಯಿಗೆ ತುಂಬಾ ಅವಮಾನವಾಯಿತು. ಅತಿಥಿಗಳು ಹೋದಮೇಲೆ ಸಿಟ್ಟು ತಡೆಯಲಾರದೇ ಶಂಭೂಗೆ ಗದರಿದರು. ಆಗ ಶಂಭೂ ಉದ್ಧಟತನದಿಂದ ತಿರುಗಿ ಅಮ್ಮನಿಗೇ, 'ಕತ್ತೆ... ಕಿರುಬ... ನಾಯಿ... ಬೆಕ್ಕು...' ಅನ್ನಲು ಶುರು ಮಾಡಿದ. ಆಗ ತಾಯಿ, "ಬೇಡ... ಬೇಡ ಶಂಭೂ, ಹೀಗೆ ಕೆಟ್ಟ ಮಾತುಗಳನ್ನಾಡಬೇಡ. ಆ ದೇವರು ನಮ್ಮ ಎಲ್ಲಾ ಮಾತುಗಳನ್ನೂ ಕೇಳಿಸಿಕೊಳ್ಳುತ್ತಾ, 'ತಥಾಸ್ತು... ತಥಾಸ್ತು...' ಅನ್ನುತ್ತಾ ಇರುತ್ತಾನೆ. ನಾವು ಕೆಟ್ಟ ಮಾತುಗಳನ್ನಾಡುತ್ತಿದ್ದರೆ ನಮಗೆ ಕೆಟ್ಟದ್ದೇ ಆಗುತ್ತದೆ. ನಾವು ಒಳ್ಳೆಯ ಮಾತುಗಳನ್ನಾಡಿದರೆ ನಮಗೆ ಒಳ್ಳೆಯದೇ ಆಗುತ್ತದೆ. ಅದಕ್ಕೇ ಯಾವಾಗಲೂ ಒಳ್ಳೆಯ ಮಾತುಗಳನ್ನೇ ಆಡುತ್ತಿರಬೇಕು. ಇನ್ನಾದರೂ ನಿನ್ನ ಕೆಟ್ಟ ಅಭ್ಯಾಸ ಬಿಟ್ಟುಬಿಡು" ಎಂದಳು. ಶಂಭೂ ಹಟದಿಂದ ಇನ್ನೂ ಜೋರಾಗಿ, ಕತ್ತೆ... ಕಿರುಬ... ಎಂದು ಕಿರುಚತೊಡಗಿದ.

ಇದುವರೆಗೂ ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದ ಆ ದೇವರಿಗೆ ಈಗ ಶಂಭೂನ ಹಟ ಕಂಡು ತುಂಬಾ ಸಿಟ್ಟು ಬಂತು. ಈ ಹಟಮಾರಿ ಶಂಭೂಗೆ ತಕ್ಕ ಬುದ್ಧಿ ಕಲಿಸಬೇಕು ಅಂತ ಆತ ತೀರ್ಮಾನಿಸಿದ.

ಶಂಭೂ ಜೋರಾಗಿ ಅವನಮ್ಮನಿಗೆ, ನೀನು ಕತ್ತೆ... ಕಿರುಬ... ಅಂದಕೂಡಲೇ "ತಥಾಸ್ತು! ಹಾಗೇ ಆಗಲಿ". ಅಂದುಬಿಟ್ಟ! ತಕ್ಷಣವೇ ಶಂಭೂನ ಅಮ್ಮ ಒಂದು ದೊಡ್ಡ ಕಿರುಬ(ಹುಲಿಯಂತಾ ದೊಡ್ಡ ಪ್ರಾಣಿ)ನಾಗಿ ಬದಲಾಗಿ ಹೋದಳು! ತನ್ನೆದುರಿಗೆ ಅಮ್ಮನ ಬದಲು ಹುಲಿಯಂತಾ ಭಯಂಕರ ಮೃಗ ಬಾಯ್ತೆರೆದು ನಿಂತಿದ್ದನ್ನು ನೋಡಿ ಶಂಭೂ ಭಯದಿಂದ ಕಂಗಾಲಾಗಿ ಹೋದ. ಏನು ಮಾಡಲೂ ತೋಚದೇ ಜೋರಾಗಿ ಅಳುತ್ತಾ, "ದೇವರೇ ತಪ್ಪಾಯಿತು. ನಾನು ಇನ್ನೆಂದಿಗೂ ಕೆಟ್ಟ ಮಾತುಗಳನ್ನು ಆಡುವುದಿಲ್ಲ. ಕ್ಷಮಿಸು. ನನ್ನ ಅಮ್ಮನನ್ನು ಮತ್ತೆ ಮೊದಲಿನಂತೇ ಮಾಡು" ಎಂದು ದೇವರನ್ನು ಕೈ ಮುಗಿದು ಬೇಡಿಕೊಂಡ.

ದೇವರು ಮುಗುಳ್ನಗುತ್ತಾ ಕರುಣೆಯಿಂದ ಮತ್ತೆ 'ತಥಾಸ್ತು' ಎಂದ. ಕಿರುಬನಾಗಿದ್ದ ಅಮ್ಮ ಮತ್ತೆ ಮೊದಲಿನಂತೇ ಶಂಭೂನ ಪ್ರೀತಿಯ ಅಮ್ಮನಾಗಿ ಬದಲಾದಳು. ಶಂಭೂ ಸಂತೋಷದಿಂದ ಅಮ್ಮನನ್ನು ಅಪ್ಪಿಕೊಂಡು ತಾನು ಇನ್ನೆಂದಿಗೂ ಕೆಟ್ಟ ಮಾತುಗಳನ್ನು ಆಡುವುದಿಲ್ಲವೆಂದು ಮಾತು ಕೊಟ್ಟ.

ಅಂದಿನಿಂದ ಶಂಭೂ ಕೆಟ್ಟ ಮಾತುಗಳನ್ನು ಬಿಟ್ಟು, ಸದಾ ಒಳ್ಳೆಯ ಮಾತಾಡುವುದನ್ನೇ ರೂಢಿಸಿಕೊಂಡು ಒಳ್ಳೆಯ ಹುಡುಗನಾಗಿ ಬದಲಾದ.